**ಚಿತ್ರಪಟ ಕಥನ**

# ನಕ್ಷತ್ರ ನಕ್ಷೆ

■ ಸುಮಲತಾ ಎನ್‌

ಖಗೋಳದ ಅಂಗಳವೆಂಬುದು ವಿಸ್ಮಯಗಳ ಆಗರ. ಆ ವಿಸ್ಮಯಗಳನ್ನು ಕ್ಯಾಮೆರಾ ಕಣ್ಣಿನಲ್ಲಿ ದಾಖಲಿಸುವ 'ಆಸ್ಟ್ರೋಫೋಟೊಗ್ರಫಿ' (ಖಗೋಳ ಛಾಯಾಗ್ರಹಣ) ಇತ್ತೀಚೆಗೆ ಸಾಕಷ್ಟು ಜನಪ್ರಿಯಗೊಳ್ಳುತ್ತಿದೆ. ಖಗೋಳ ಛಾಯಾಗ್ರಹಣವನ್ನು ಪ್ರಚುರಪಡಿಸುವ ಜೊತೆಗೆ ಆಕಾಶಲೋಕದ ಅಚ್ಚರಿಗಳನ್ನು ಜಗತ್ತಿಗೆ ತೋರುವ ಆಶಯದೊಂದಿಗೆ 'ಟ್ರಾವೆಲ್ ಫೋಟೊಗ್ರಫಿ' ಬ್ಲಾಗ್ 'ಕ್ಯಾಪ್ಚರ್ ದಿ ಅಟ್ಲಾಸ್' 2017ರಿಂದ 'ಮಿಲ್ಕಿ ವೇ ಫೋಟೊಗ್ರಫರ್ ಆಫ್ ದಿ ಇಯರ್' ಎಂಬ ಸ್ಪರ್ಧೆಯನ್ನು ಹಮ್ಮಿಕೊಳ್ಳುತ್ತಾ ಬಂದಿದೆ.

ಸ್ಪರ್ಧೆಯಲ್ಲಿ ವಿಶ್ವದಾದ್ಯಂತ ಹಲವು ಛಾಯಾಗ್ರಾಹಕರು ಭಾಗವಹಿಸುತ್ತಾರೆ. ಅಂತಿಮವಾಗಿ 25 ಛಾಯಾಚಿತ್ರಗಳನ್ನು ಆಯ್ಕೆ ಮಾಡಲಾಗುತ್ತದೆ. ಡಾನ್ ಝೂಫ್ರಾ ಇದರ ಸಂಪಾದಕರಾಗಿದ್ದು, ಮೇ ತಿಂಗಳಿನಲ್ಲಿ ಇದರ ಫಲಿತಾಂಶವನ್ನು ಪ್ರಕಟಗೊಳಿಸುತ್ತಾರೆ. ಪ್ರತಿ ವರ್ಷದಂತೆ ಈ ಬಾರಿ ಕೂಡ ಸ್ಪರ್ಧೆ ನಡೆದಿದ್ದು, ಸ್ಪರ್ಧೆಯ ಐದನೇ ಆವೃತ್ತಿಯ ವಿಜೇತರ ಪಟ್ಟಿಯನ್ನು ಬಿಡುಗಡೆಗೊಳಿಸಲಾಗಿದೆ.

ಈ ವರ್ಷ ಹನ್ನೆರಡು ದೇಶಗಳ ಛಾಯಾಗ್ರಾಹಕರು ಸ್ಪರ್ಧೆಯಲ್ಲಿ ಭಾಗವಹಿಸಿದ್ದು – ಅಮೆರಿಕ, ಆಸ್ಟ್ರೇಲಿಯಾ, ನ್ಯೂಜಿಲೆಂಡ್, ಚಿಲಿ, ಅರ್ಜೆಂಟೀನಾ, ಈಜಿಪ್ಟ್, ಫ್ರಾನ್ಸ್, ಸ್ಪೇನ್, ಸ್ಲಾವೆನಿಯಾ, ಸ್ಲೊವೊಕಿಯಾ, ಜಪಾನ್ ಹಾಗೂ ಚೀನಾ ದೇಶದ ಛಾಯಾಗ್ರಾಹಕರ ಚಿತ್ರಗಳನ್ನು ಆಯ್ಕೆ ಮಾಡಲಾಗಿದೆ. ಆಯ್ಕೆಯಾದ ಛಾಯಾಚಿತ್ರಗಳ ಪೈಕಿ ಕೆಲವು ಚಿತ್ರಗಳು ಇಲ್ಲಿವೆ.

ಪ್ರತಿಕ್ರಿಯಿಸಿ: feedback@sudha.co.in





**ಹಿಮನದಿ ಜೊತೆಗೂಡಿದ ಆಕಾಶ**

ಟಿಬೆಟ್‌ನ ಫುಮೌಂಕು ಎಂಬ ಈ ಸ್ಥಳ 'ಬ್ಲೂ ಐಸ್ ಲೇಕ್' ಎಂದೇ ಪ್ರಸಿದ್ಧಿ. ಅಲ್ವಿನ್ ವು 'ಐಸ್ ಏಜ್' ಎಂಬ ಛಾಯಾಚಿತ್ರ ತೆಗೆದಿದ್ದು ಇಲ್ಲಿಯೇ. ಪ್ರತಿ ಚಳಿಗಾಲದಲ್ಲಿಯೂ ಗಟ್ಟಿಯಾಗುವ ಈ ಹಿಮನದಿ ಸ್ಫಟಿಕದಂತೆ ಗೋಚರಿಸುತ್ತದೆ. 'ಚಳಿಗಾಲದ ಈ ಸುಂದರ ಆಗಸದ ಚಿತ್ರ ತೆಗೆಯುವಾಗ ರಾತ್ರಿ ಹೊತ್ತು ಕನಿಷ್ಠ ತಾಪಮಾನದಲ್ಲಿ ಆಗಾಗ್ಗೆ ಗಟ್ಟಿಯಾಗಿರುವ ಹಿಮ ಒಡೆಯುವ ಸದ್ದು ಕೇಳುತ್ತದೆ. ಆ ಅನುಭವವೇ ರೋಚಕ. ತಿಳಿ ನೀಲಿ ಚಾದರದಂತೆ ಕಾಣುವ ನದಿ, ಅದರಲ್ಲಿ ಪ್ರತಿಬಿಂಬವಾದ ಆಕಾಶ ಸುಂದರ ಕಾಲ್ಪನಿಕ ಲೋಕವೊಂದನ್ನೇ ತೆರೆದಿಡುತ್ತದೆ. ಈ ಮಾಂತ್ರಿಕ ರಾತ್ರಿಯಲ್ಲಿ ನಕ್ಷತ್ರಗಳ ಸಾಂಗತ್ಯ ಎಷ್ಟು ಖುಷಿ ನೀಡುವುದಿಲ್ಲ ಹೇಳಿ?' ಎಂದು ಪ್ರಶ್ನಿಸುತ್ತಾರೆ ಅಲ್ವಿನ್.